*Published in Prajavani News Paper dated: 30/06/2018*

# ಸಿ.ವಿ.ರಾಮನ್ ಆಸ್ಪತ್ರೆ ಆವರಣಕ್ಕೆ ಹೊಸ ರೂಪ

ಬೆಂಗಳೂರು: 'ಇಂದಿರಾನಗರದ ಸರ್ ಸಿ.ವಿ.ರಾಮನ್ ಸರ್ಕಾರಿ ಆಸ್ಪತ್ರೆ ಬಳಿ ನಿರುಪಯುಕ್ತವಾಗಿದ್ದ ಸ್ಥಳವನ್ನು ಸಾರ್ವಜನಿಕರ ಬಳಕೆಗೆ ಉಪಯೋಗವಾಗುವಂತೆ ಮಾಡಿ, ಉದ್ಯಾನ ನಿರ್ಮಿಸುವಲ್ಲಿ ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆ್ಯಂಡ್ ಪ್ಲಾನಿಂಗ್ ಸಂಸ್ಥೆ ಯಶಸ್ವಿಯಾಗಿದೆ ಎಂದು ಡೀನ್ ಪ್ರೊ.ಕೆ.ವಿ.ಕೃಷ್ಣಮೂರ್ತಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,'ರೋಗಿಗಳು ಹಾಗೂ ಅವರ ಜೊತೆಗಾರರು ಆಸ್ಪತ್ರೆಯ ಮೆಟ್ಟಿಲು ಅಥವಾ ಹೊರಗಡೆ ಕುಳಿತುಕೊಳ್ಳಬೇಕಾಗುತ್ತಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ, ಟೈರ್, ಬಾಟಲಿ, ಹಗ್ಗ, ಸೈಕಲ್ ರಿಮ್ ಮತ್ತಿತರ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಆಸನ ವ್ಯವಸ್ಥೆ ಹೊಂದಿರುವ ಮಿನಿ ಉದ್ಯಾನ ನಿರ್ಮಿಸಲಾಗಿದೆ' ಎಂದರು.

'ನರೇಂದ್ರ ಪಿ. ರೆಡ್ಡಿ ಮತ್ತು ಜೆನಿಷಾ. ಆರ್ ಅವರ ನೇತೃತ್ವದಲ್ಲಿ ಸಂಸ್ಥೆಯ ವತಿಯಿಂದ ಕೇವಲ ₹10,000 ವೆಚ್ಚದಲ್ಲಿ ವಿದ್ಯಾರ್ಥಿಗಳು ಇಡೀ ಜಾಗವನ್ನು ಸ್ವಚ್ಛಗೊಳಿಸಿ ಕಾಲುದಾರಿ, ಸಣ್ಣ ಕೊಳ ಹಾಗೂ ಮಕ್ಕಳಿಗೆ ಆಟದ ಮೈದಾನ ಮಾಡಿದ್ದಾರೆ' ಎಂದು ಪ್ರಾಂಶುಪಾಲ ಡಾ.ಎಸ್.ಸತೀಶ್ ಅವರು ಹೇಳಿದ್ದಾರೆ.